

ಕಡೆಗೆ ಮುಖಮಾಡಿದರು. ಮೌಲ್ವಿ ಸಾಹೇಬರು ತಮ್ಮ ಗಲ್ಲದ ಮೇಲೆ ಬೆರಳನ್ನಿಟ್ಟುಕೊಳ್ಳುತ್ತ ಗೊತ್ತಿಲ್ಲವೆನ್ನುವ ರೀತಿಯಲ್ಲಿ ತಲೆಯನ್ನು ಅಡ್ಡಡ್ಡ ಆಡಿಸಿದರು. ಮೇಲಿನ ಬರ್ತ್‌ನಲ್ಲಿ ಕುಳಿತಿದ್ದ ವ್ಯಕ್ತಿಯೂ 'ನನಗೂ ಇವರ ಪರಿಚಯವಿಲ್ಲ' ಎಂದು ಹೇಳಿದಾಗ ನನ್ನ ಪಕ್ಕದಲ್ಲಿ ಕುಳಿತಿದ್ದ ಮಹಾನುಭಾವ ಒಮ್ಮೆ ನಿಟ್ಟುಸಿರು ಬಿಡುತ್ತ, 'ಆಶ್ಚರ್ಯ... ಆಶ್ಚರ್ಯ... ವಿಚಿತ್ರ...' ಎಂದು ಗೊಣಗಿದ; ಆತನ ಧ್ವನಿ ನನಗೆ ಮಾತ್ರ ಕೇಳಿಸುವಂತಿತ್ತು.

ಅಮರ್ ಸಿಂಗ್‌ರ `ಕಾಬೂಲಿ' ಕಾದಂಬರಿಯ ವಿಷಯವನ್ನು ಪ್ರಸ್ತಾಪಿಸುವ ಮೂಲಕ ಆತನ ಗಮನವನ್ನು ನನ್ನ ಕಡೆಗೆ ಸೆಳೆದುಕೊಳ್ಳುವುದಕ್ಕೆ ಬಯಸಿದೆ. ಆದರೆ ಆತನ ತಲೆಯ ಮೇಲೆ ಆಶ್ಚರ್ಯ ಮತ್ತು ದುಃಖದ ಬೆಟ್ಟವೇ ಕುಸಿದುಬಿದ್ದಿತ್ತು! ಈಗ ಆತ ಅಲ್ಲಿದ್ದ ಎಲ್ಲರನ್ನೂ ಉದ್ದೇಶಿಸಿ ಜೋರಾಗಿ ಹೇಳಿದ, "ಎಲ್ಲದಕ್ಕೂ ಒಂದು ಮಿತಿಯಿರಬೇಕು... ನಾವೆಲ್ಲರೂ ಎಂತಹ ಮಹಾನ್ ಕವಿಯ ಜೊತೆಯಲ್ಲಿ ಪ್ರಯಾಣ ಮಾಡುತ್ತಿದ್ದೇವೆ ನಿಮ್ಮಲ್ಲಿ ಒಬ್ಬರಿಗೂ ತಿಳಿದಿಲ್ಲವೇ!? ಹಾಗಿದ್ದರೆ ನೀವೆಲ್ಲರೂ ಧನ್ಯರು... ಧನ್ಯವಾಯಿತು ಭಾರತ."

ಆತ ನನ್ನ ಕಡೆಗೆ ತಿರುಗಿದ. ನಾನು ನುಡಿದೆ, "ನೀವೇಕೆ ಅನವಶ್ಯಕವಾಗಿ ಇದರ ಬಗ್ಗೆ ಇಷ್ಟೊಂದು ಬೇಸರಗೊಳ್ಳುತ್ತಿದ್ದೀರಿ?"

"ಅನವಶ್ಯಕವೇ? ಇಷ್ಟೊಂದು ದೊಡ್ಡ ಕವಿಯ ಜೊತೆಯಲ್ಲಿ ಪ್ರಯಾಣಿಸುತ್ತಿರುವವರಿಗೆ ಅವರ ಪರಿಚಯವೇ ಇಲ್ಲವೆಂದರೆ ಬೇಸರವಾಗದಿರುತ್ತದೆಯೇ?"

ಎದುರಿನಲ್ಲಿ ಕುಳಿತಿದ್ದ ಬಂಗಾಳಿ ಮಹಿಳೆಯ `ಗಂಡ' ಮಹಾಶಯ ಮುಖವನ್ನು ಇನ್ನಷ್ಟು ಸಿಂಡರಿಸಿಕೊಂಡು ಹೇಳಿದ, "ಹಾಗಿದ್ದರೆ, ಕುತ್ತಿಗೆಗೆ ಒಂದು ನೇಮ್ ಪ್ಲೇಟ್ ನೇತುಹಾಕಿಕೊಳ್ಳುವಂತೆ ನಿಮ್ಮ ದೊಡ್ಡ ಕವಿಗೆ ಹೇಳಿ."

ಆದರೆ ಮೌಲ್ವಿ ಸಾಹೇಬರು ಅತ್ಯಂತ ಸೌಜನ್ಯಯುತವಾಗಿ ಪ್ರಶ್ನಿಸಿದರು, "ನೀವು ಇವರ (ನನ್ನತ್ತ ನೋಡುತ್ತ) ಬಗ್ಗೆ ಪ್ರಶಂಸೆ ಮಾಡುತ್ತಿದ್ದೀರೇನು?"

"ಹೌದು ಸಾಹೇಬರೇ... ಒಂದು ವೇಳೆ ಇವರ ಕವಿತೆಯನ್ನು ಕೇಳಿದರೆ ನೀವೂ ಇವರನ್ನು ಹೊಗಳುತ್ತೀರಿ. ಇವರ ಪರಿಚಯ ಮಾಡಿಕೊಳ್ಳಿ... ಇವರ ಹೆಸರನ್ನು ಬರೆದುಕೊಳ್ಳಿ... ಇವರ ಹೆಸರು... ನಂದಾಕಿಶೋರ. ತುಂಬಾ ಜನಪ್ರಿಯವಾಗಿರುವ 'ಲಾಲ್ ಸಾಂಪ್ (ಕೆಂಪು ಹಾವು)' ಕೃತಿಯ ಲೇಖಕರು ಇವರೇ..."

ಆತ ನನ್ನ ಹಾಗೂ ಪುಸ್ತಕದ ಹೆಸರನ್ನು ತಪ್ಪಾಗಿ ಹೇಳಿದ್ದ. ಅದನ್ನು ಸರಿಪಡಿಸುವುದು ನನ್ನ ಕರ್ತವ್ಯವಲ್ಲವೇ! "ನನ್ನ ಹೆಸರು ನಂದಾಕಿಶೋರ ಅಲ್ಲ, ನಂದಕಿಶೋರ. ಹಾಗೆಯೇ ನನ್ನ ಕೃತಿಯ ಹೆಸರು 'ಹರಾ ಸಾಂಪ್ (ಹಸಿರು ಹಾವು).' ಇನ್ನೂ ಕೆಲವು ಕೃತಿಗಳಿವೆ..."

ಆದರೆ ನಾನು ಮಾತು ಮುಂದುವರಿಸುವುದಕ್ಕೆ ಆತ ಬಿಡಲಿಲ್ಲ. ನನ್ನ ಮಾತನ್ನು ಅರ್ಧದಲ್ಲಿಯೇ ತಡೆಯುತ್ತ ಹೇಳಿದ, "ಒಂದು ನಿಮಿಷ... ದಯವಿಟ್ಟು ತಾವು ಸುಮ್ಮನಿರಿ. ನಿಮ್ಮ ಪರಿಚಯವನ್ನು ನೀವೇ ಮಾಡಿಕೊಳ್ಳುವುದು ನನಗೆ ಅವಮಾನ; ಸಮಾಜಕ್ಕೇ ನಾಚಿಕೆಯಾಗುವಂತಹ ಸಂಗತಿ. ನೋಡಿ ಸಾಹೇಬರೇ, ಒಂದು ವೇಳೆ ಇವರ ಕವಿತೆಯನ್ನು ಕೇಳಿದರೆ ನಿಮ್ಮ ಹೃದಯ ಕರಗಿಹೋಗುತ್ತದೆ. ಇವರ ಪುಸ್ತಕವನ್ನು ಓದಿದರೆ ನಿಮ್ಮ ಹೃದಯವೇ ಬಾಯಿಗೆ ಬಂದುಬಿಡುತ್ತದೆ... ಅರ್ಥವಾಯಿತೇ?"

ತಕ್ಷಣವೇ ಬಂಗಾಳಿ ಮಹಿಳೆ ಹೇಳಿದಳು, "ಸಾಕು ನಿಲ್ಲಿಸಿ... ಇವರ ಕವಿತೆ ಕೇಳುವುದಕ್ಕೆ ನಮಗೇನು ಬೇರೆ ಕೆಲಸವಿಲ್ಲವೇ?"

ಆದರೆ ನಮಗೆ ಸಮೀಪದಲ್ಲಿಯೇ ನಿಂತಿದ್ದ, ಪ್ರತಿದಿನವೂ ಅದೇ ರೈಲಿನಲ್ಲಿ ಪ್ರಯಾಣಿಸುವವರು,